## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-104/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 07/02/2020.

## ವಿಚಾರಣಾ ವರದಿ

ಉಪಸ್ಥಿತರು: ಸೆಲ್ವಕುಮಾರ್.ಸಿ, ಅಪರ ನಿಬಂಧಕರು
ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ವಿಷಯ: (1)**ಶ್ರೀ ಹರಿಶ್ಚಂದ್ರ, ಕಾರ್ಯದರ್ಶಿ ಮತ್ತು (2) ಕುಮಾರಿ ಶೈಲಜ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಂದೂರ (ಕೆ) ಗ್ರಾಮ ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: 1.ಕಂಪ್ಲೆಂಟ್/ಉಪಲೋಕ್/ಜಿಎಲ್.ಬಿ-2227/2013/ಎಆರ್.ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 14/12/2016.
2.ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/900/ಗ್ರಾಪಂಕಾ/2016, ಬೆಂಗಳೂರು, ದಿನಾಂಕ:11/01/2017.
3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ-104/2017, ಬೆಂಗಳೂರು ದಿನಾಂಕ: 23/01/2017.
4.Note No.Uplok-1 & 2/DE/Transfers/ 2019, dated 07.02.2019.

* * * *

ಈ ದೂರನ್ನು, ದೂರುದಾರರಾದ ಶ್ರೀ.ಉಮಾಪತಿ ಬಿನ್ ನಾಗಪ್ಪ ಪಾಟೀಲ, ನಂದೂರು ಕೆ., ಗುಲ್ಬರ್ಗ ರವರು ಆಪಾದಿತ ಸರ್ಕಾರಿ ನೌಕರರುಗಳಾದ (1) ಶ್ರೀ ಹರಿಶ್ಚಂದ್ರ, ಕಾರ್ಯದರ್ಶಿ, ನಂದೂರು ಕೆ. ಗ್ರಾಮ ಪಂಚಾಯಿತಿ ಮತ್ತು (2) ಕುಮಾರಿ ಶೈಲಜ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಂದೂರ (ಕೆ) ಗ್ರಾಮ ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ ರವರುಗಳ **(ಇನ್ನು ಮುಂದೆ ಆ.ಸ.ನೌ ಎಂದು ಕರೆಯಲ್ಪಡುತ್ತಾರೆ)** ವಿರುದ್ಧ ಕರ್ತವ್ಯ ಲೋಪ ಮತ್ತು ದುರ್ನಡತೆಯಿಂದ ವರ್ತಿಸಿರುವುದಾಗಿ ಆಪಾದಿಸಿ ದೂರು ದಾಖಲಿಸಿರುತ್ತಾರೆ.

2) ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 11/01/2017ರಂದು ಮಾನ್ಯ ಉಪಲೋಕಾಯುಕ್ತ-2ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-1ರವರು ದಿನಾಂಕ 23/01/2017ರಂದು ಅಪರ ನಿಬಂಧಕರು, ವಿಚಾರಣೆಗಳು-11ರವರಿಗೆ ವಿಚಾರಣೆ ಮಾಡಿ ವರದಿಯನ್ನು, ಉಲ್ಲೇಖ (3)ರಲ್ಲಿ ಕಾಣಿಸಿದಂತೆ ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು-11ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16ಕ್ಕೆ ವರ್ಗಾವಣೆಗೊಂಡಿರುತ್ತದೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌರವರುಗಳ ವಿರುದ್ಧ ದೋಷರೋಪಣೆ (Article of charges)ಅನ್ನು ಅಪರ ನಿಬಂಧಕರು, ವಿಚಾರಣೆಗಳು-11ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ 22/2/2017ರಂದು ಕಳುಹಿಸಲಾಗಿರುತ್ತದೆ. ವಿಚಾರಣೆಯ ಮಧ್ಯಂತರ ಅವಧಿಯಲ್ಲಿ ಹಿಂದಿನ ವಿಚಾರಣಾಧಿಕಾರಿಗಳವರು ರಚಿಸಿದ ದೋಷಾರೋಪಣೆಯಲ್ಲಿ ಚಿಕ್ಕ ಬೆರಳಚ್ಚು ಲೋಪ ಕಂಡು ಬಂದಿದ್ದರಿಂದ ಉಭಯತ್ರರ ಸಮ್ಮತಿಯೊಂದಿಗೆ ಈ ವಿಚಾರಣಾ ಪ್ರಧಿಕಾರವು ದಿನಾಂಕ 16/12/2019 ರಂದು ಪರಿಷ್ಕೃತ ದೋಷಾರೋಪಣೆ ರಚಿಸಿದ್ದು, ಅದು ಈ ಕೆಳಕಂಡಂತಿದೆ.

## ಅನುಬಂಧ-1

## ದೋಷಾರೋಪಣೆ

4) ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಹರಿಶ್ಚಂದ್ರ ಆದ ನೀವು ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕಿನ ನಂದೂರು ಕೆ. ಗ್ರಾಮಪಂಚಾಯಿತಿಯಲ್ಲಿ ಪ್ರಭಾರಿ ಕಾರ್ಯದರ್ಶಿಯಾಗಿ 2007ನೇ ಇಸವಿಯಲ್ಲಿ ಹಾಗೂ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಕುಮಾರಿ ಶೈಲಜಾ

ಆದ ನೀವು ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕಿನ ನಂದೂರು ಕೆ.ಗ್ರಾಮಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ 2010ನೆ ಇಸವಿಯಲ್ಲಿ ನೀವುಗಳು ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 2005-06, 2006-07, 2008-09, 2009-10 ನೇಯ ಸಾಲಿನ ಇಂದಿರಾ ಆವಾಸ್ ಯೋಜನೆ ಮತ್ತು 2005-06 ನೇಯ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಮನೆಗಳನ್ನು ಕಟ್ಟದೇ ಇದ್ದರೂ ಹಾಗೂ ಮನೆಗಳನ್ನು ಪೂರ್ಣಗೊಳಿಸದೇ ಇದ್ದರೂ ಸಹ, ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡುವುದರ ಮೂಲಕ ಸರ್ಕಾರಿ ನೌಕರರಿಗೆ ತಕ್ಕದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು(ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

**ಅನುಬಂಧ-2**

**ದೋಷಾರೋಪಣೆಯ ವಿವರ**

5) ದೂರುದಾರರಾದ ಶ್ರೀ.ಉಮಾಪತಿ ಬಿನ್ ನಾಗಪ್ಪ ಪಾಟೀಲ್, ನಂದೂರು ಕೆ.ಗುಲ್ಬರ್ಗಾ ಇವರು ಈ ಸಂಸ್ಥೆಯಲ್ಲಿ ನಿಮ್ಮಗಳ ವಿರುದ್ಧ ದೂರನ್ನು ಸಲ್ಲಿಸಿ ಸದರಿ ದೂರಿನಲ್ಲಿ ನೀವುಗಳು 2005-06 ನೇಯ ಸಾಲಿನಿಂದ 2009-10 ನೇಯ ಸಾಲಿನ ಇಂದಿರಾ ಆವಾಸ್ ಯೋಜನೆ ಮತ್ತು 2005-06 ನೇಯ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳು ಮನೆಗಳನ್ನು ಕಟ್ಟದೇ ಇದ್ದರೂ ಹಾಗೂ ಮನೆಗಳನ್ನು ಪೂರ್ಣಗೊಳಿಸದೇ ಇದ್ದರೂ ಸಹ ನೀವುಗಳು ಫಲಾನುಭವಿಗಳು ಹಣವನ್ನು ಬಿಡುಗಡೆ ಮಾಡಿರುತ್ತೀರೆಂದು ಆಪಾದಿಸಿರುತ್ತಾರೆ.

ದೂರುದಾರರು ಮಾಡಿರುವ ಸದರಿ ಆಪಾದನೆಗೆ ಸಂಬಂಧಿಸಿದಂತೆ ಕಲಬುರಗಿಯ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಿದ್ದರ ಮೇರೆಗೆ ಕಲಬುರಗಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು, ತಮ್ಮ ಅಧೀನ ಅಧಿಕಾರಿಯಾದ ಪೊಲೀಸ್ ನಿರೀಕ್ಷಕರಿಗೆ ತನಿಖೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿರುತ್ತಾರೆ. ಅದರಂತೆ ಪೊಲೀಸ್ ನಿರೀಕ್ಷಕರು ತನಿಖೆಯನ್ನು

ನಡೆಸಿ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯಲ್ಲಿ ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

| ಕ್ರಮ ಸಂಖ್ಯೆ | ಫಲಾನುಭವಿಯ ಹೆಸರು ಶ್ರೀ/ಶ್ರೀಮತಿ | ಯೋಜನೆಯ ಹೆಸರು ಮತ್ತು ವರ್ಷ | ಷರಾ |
|---|---|---|---|
| 1 | ಮಲ್ಲಮ್ಮ | ಇಂದಿರಾ ಆವಾಸ್–2008–2009 | ಮನೆ ಕಟ್ಟಿರುವುದಿಲ್ಲ. |
| 2 | ಮಹಾದೇವಿ | ಇಂದಿರಾ ಆವಾಸ್–2008–2009 | ಕಡತದಲ್ಲಿರುವ ಛಾಯಾಚಿತ್ರಗಳು ಫಲಾನುಭವಿಯ ಮನೆಗೆ ಹೋಲಿಕೆಯಾಗುವುದಿಲ್ಲ. |
| 3 | ಇಂದುಬಾಯಿ | ಇಂದಿರಾ ಆವಾಸ್–2008–2009 | ಮನೆ ಕಟ್ಟಿರುವುದಿಲ್ಲ. |
| 4 | ಮಹಾನಂದ | ಇಂದಿರಾ ಆವಾಸ್–2005–2006 | ಮನೆ ಕಟ್ಟಿರುವುದಿಲ್ಲ. |
| 5 | ಕವಿತಾಬಾಯಿ | ಇಂದಿರಾ ಆವಾಸ್–2009–2010 | ಮನೆ ಕಟ್ಟಿರುವುದಿಲ್ಲ. |
| 6 | ರಾಚಮ್ಮ | ಇಂದಿರಾ ಆವಾಸ್–2009–2010 | ಕಡತದಲ್ಲಿರುವ ಛಾಯಾಚಿತ್ರಗಳು ಫಲಾನುಭವಿಯ ಮನೆಗೆ ಹೋಲಿಕೆಯಾಗುವುದಿಲ್ಲ. |
| 7 | ರತ್ನಮ್ಮ | ಇಂದಿರಾ ಆವಾಸ್–2005–2006 | ಮನೆ ಕಟ್ಟಿರುವುದಿಲ್ಲ. |
| 8 | ಇಂದುಮತಿ | ಇಂದಿರಾ ಆವಾಸ್–2006–2007 | ಮನೆ ಪೂರ್ಣಗೊಳಿಸಿರುವುದಿಲ್ಲ. |
| 9 | ಶಾಂತಬಾಯಿ | ಇಂದಿರಾ ಆವಾಸ್–2006–2007 | ಮನೆ ಕಟ್ಟಿರುವುದಿಲ್ಲ. |
| 10 | ದೇವಿಬಾಯಿ | ಇಂದಿರಾ ಆವಾಸ್–2006–2007 | ಮನೆ ಕಟ್ಟಿರುವುದಿಲ್ಲ. |
| 11 | ಸುಶೀಲಾ ಬಾಯಿ | ಇಂದಿರಾ ಆವಾಸ್–2006–2007 | ಮನೆ ಕಟ್ಟಿರುವುದಿಲ್ಲ. |
| 12 | ಮಲ್ಲಮ್ಮ | ಇಂದಿರಾ ಆವಾಸ್–2006–2007 | ಮನೆ ಕಟ್ಟಿರುವುದಿಲ್ಲ. |

| | | | |
|---|---|---|---|
| 13 | ಸಿದ್ದಮ್ಮ | ಇಂದಿರಾ ಆವಾಸ್-2005-2006 | ಮನೆ ಕಟ್ಟಿರುವುದಿಲ್ಲ. |
| 14 | ಬಂಡೆಮ್ಮ | ಇಂದಿರಾ ಆವಾಸ್-2006-2007 | ಮನೆ ಕಟ್ಟಿರುವುದಿಲ್ಲ. |
| 15 | ಪುಷ್ಪಲತ | ಇಂದಿರಾ ಆವಾಸ್-2009-2010 | ಮನೆ ಕಟ್ಟಿರುವುದಿಲ್ಲ. |
| 16 | ಶಿವಮ್ಮ | ಇಂದಿರಾ ಆವಾಸ್-2006-2007 | ಮನೆ ಕಟ್ಟಿರುವುದಿಲ್ಲ. |
| 17 | ಶಿವುಬಾಯಿ | ಇಂದಿರಾ ಆವಾಸ್-2006-2007 | ಮನೆ ಕಟ್ಟಿರುವುದಿಲ್ಲ. |
| 18 | ಯಲ್ಲಮ್ಮ | ಇಂದಿರಾ ಆವಾಸ್-2008-2009 | ಕಡತದಲ್ಲಿರುವ ಛಾಯಾಚಿತ್ರಗಳು ಫಲಾನುಭವಿಯ ಮನೆಗೆ ಹೋಲಿಕೆಯಾಗುವುದಿಲ್ಲ. |
| 19 | ಜಗದೇವಿ | ಇಂದಿರಾ ಆವಾಸ್-2009-2010 ಆಶ್ರಯ ಯೋಜನೆ-2005-06 | ಎರಡು ಮನೆಗಳನ್ನು ಫಲಾನುಭವಿಗೆ ಹಂಚಿಕೆ ಮಾಡಿರುತ್ತಾರೆ. |

6) ತನಿಖಾ ವರದಿಗೆ ಸಂಬಂದಿಸಿದಂತೆ ಆಪಾದಿತ ಸರ್ಕಾರಿ ನೌಕರರುಗಳಾದ ನೀವುಗಳು ನಿಮ್ಮ ವಿವರಣೆಯನ್ನು ಸಲ್ಲಿಸಿದ್ದು, ನೀವು ಆಪಾದನೆಗಳನ್ನು ನಿರಾಕರಿಸಿರುವ ವಿವರಣೆಯನ್ನು ಮತ್ತು ಸಂಬಂದಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರಾದ ನೀವುಗಳು ಯಾವುದೇ ಕ್ರಮಗಳನ್ನು ಕೈಗೊಳ್ಳದೆ ಇರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಸದರಿ ದೂರಿಗೆ ಸಂಬಂದಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ ಆಪಾದಿತ ಸರ್ಕಾರಿ ನೌಕರರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡುಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) 1966ರಡಿ ನಿಯಮ 3(1)ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡು ಬಂದಿದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಗಳು 1966 ನಿಯಮ 3(1) ರಡಿಯಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಮತ್ತು ಗೌರವಾನ್ವಿತ

ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ, ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು-16 ರವರಿಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಲು ನೇಮಕ/ನಾಮನಿರ್ದೇಶನ ಮಾಡಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

7) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ-1 ಮತ್ತು ಆ.ಸ.ನೌ-2ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ-1 ಮತ್ತು ಆ.ಸ.ನೌ-2ರವರು ದಿನಾಂಕ: 30/03/2017ರಂದು ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆ (First Oral Statement) ನಿಯಮ 11(9) ಕೆಸಿಎಸ್ (ಸಿಸಿಎ) ರೂಲ್ಸ್ 1957ರಡಿಯಲ್ಲಿ ದಾಖಲಿಸಲಾಗಿರುತ್ತದೆ.

8) ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

9) ಆ.ಸ.ನೌ-1ರವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ತನ್ನ ವಿರುದ್ಧ ಆಪಾದಿಸಿರುವ ಆರೋಪವನ್ನು ನಿರಾಕರಿಸಿರುತ್ತಾರೆ. ಅಲ್ಲದೆ, ಈ ಪ್ರಕರಣಕ್ಕೆ ಸಂಬಂದಿಸಿದಂತೆ ತನಿಖಾಧಿಕಾರಿಯಾದ ಕಲಬುರಗಿ ಲೋಕಾಯುಕ್ತ ಪೊಲೀಸ್ ನಿರೀಕ್ಷಕರು ಸ್ಥಳಕ್ಕೆ ಭೇಟಿ ನೀಡಿ ತನಿಖೆ ಪೂರ್ಣಗೊಳಿಸಿ ವರದಿಯಲ್ಲಿ ಹೇಳಲಾದ 1 ರಿಂದ 19 ರವರೆಗಿನ ಫಲಾನುಭವಿಗಳಿಗೆ ಸಂಬಂದಪಟ್ಟಂತೆ ಸಲ್ಲಿಸಿರುವ ವರದಿಯಲ್ಲಿನ ಷರಾ ಸುಳ್ಳಿರುವುದಾಗಿ ಹೇಳಿರುತ್ತಾರೆ. ಆ ಬಗ್ಗೆ ಪ್ರತಿಯೊಂದು ಫಲಾನುಭವಿಗಳ ವ್ಯವಹರಣೆಗೆ ಸಂಬಂದಿಸಿದಂತೆ ಪ್ರತ್ಯೇಕವಾಗಿ ವಿವರಿಸಿರುತ್ತಾರೆ. ಅಲ್ಲದೆ ತನಿಖಾಧಿಕಾರಿ ಈ ಫಲಾನುಭವಿಗಳ ಮನೆಗಳಿಗೆ ಸಂಬಂದಿಸಿದಂತೆ ಸಲ್ಲಿಸಿದ ತನಿಖಾ ವರದಿಯು ಸುಳ್ಳಿನಿಂದ ಕೂಡಿರುವುದಾಗಿ, ಈ ಎಲ್ಲಾ ಕಾರಣಗಳಿಂದ ತನ್ನನ್ನು ಪ್ರಕರಣದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

10) ಆ.ಸ.ನೌ–2ರವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ತನ್ನ ವಿರುದ್ದ ಆಪಾದಿಸಿರುವ ಆರೋಪವನ್ನು ನಿರಾಕರಿಸಿರುತ್ತಾರೆ. ಮುಂದುವರೆದು ಈ ಆಸನೌ–2 ರವರು ದಿ.11/10/2010 ರಲ್ಲಿ ನಂದೂರು(ಕೆ) ಗ್ರಾಮ ಪಂಚಾಯಿತಿಯಲ್ಲಿ ಅಭಿವೃದ್ಧಿ ಅಧಿಕಾರಿಯಾಗಿ ವರದಿ ಮಾಡಿಕೊಂಡಿರುವುದಾಗಿ ಇವರಿಗಿಂತ ಮೊದಲು ಇದ್ದ ಶ್ರೀ.ಹರಿಶ್ಚಂದ್ರ (ಆಸನೌ–1) ರವರಿಂದ ದಿ.23/10/2010 ರಂದು ಪಂಚಾಯತ್ ಅಭಿವೃದ್ದಿ ಅಧಿಕಾರಿಯಾಗಿ ಪ್ರಭಾರವನ್ನು ವಹಿಸಿಕೊಂಡಿರುವುದಾಗಿ ಹೇಳಿರುತ್ತಾರೆ. ಅಲ್ಲದೆ, ಈ ಆಸನೌ–2 ರವರು ನಂದೂರು(ಕೆ) ಗ್ರಾಮ ಪಂಚಾಯಿತಿಯ ಅಧಿಕಾರವನ್ನು ವಹಿಸಿಕೊಳ್ಳುವ ಪೂರ್ವದಲ್ಲಿಯೇ ನಿಗಮದಿಂದ ಅನುಮೋದಿಸಲ್ಪಟ್ಟ ಕೆಲವು ಮನೆಗಳ ನಿರ್ಮಾಣ ಮುಗಿದು ಸಂಪೂರ್ಣ ಹಣ ಪಾವತಿಯಾಗಿತ್ತೆಂದು, ಕೆಲವು ಮನೆಗಳು ನಿರ್ಮಾಣದ ವಿವಿಧ ಹಂತದಲ್ಲಿ ಇದ್ದಿರುವುದಾಗಿ ಹೇಳಿರುತ್ತಾರೆ. ಮುಂದುವರೆದು, ಈ ಆಸನೌ–2 ರವರು ವಿವರಿಸುವುದೇನೆಂದರೆ, ತಾನು ದಿ.16/8/2010 ರಂದು ಪಂಚಾಯತ್ ಅಭಿವೃದ್ದಿ ಅಧಿಕಾರಿಯಾಗಿ ನೇಮಕಗೊಂಡಿರುವುದಾಗಿ ಹಾಗೂ ದಿ.23/10/2010 ರಂದು ನಂದೂರು (ಕೆ) ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಿಂದ ಪ್ರಭಾರವನ್ನು ಪಡೆದುಕೊಂಡಿರುವುದಾಗಿ ಹೇಳಿರುತ್ತಾರೆ. ಅಲ್ಲದೆ ದೋಷಾರೋಪಣೆಯಲ್ಲಿ ತೋರಿಸಿದ 19 ಫಲಾನುಭವಿಗಳ ಪೈಕಿ ತಾನು ಕ್ರಮ.ಸಂಖ್ಯೆ 15 ರಲ್ಲಿ ಕಾಣಿಸಿರುವ ಫಲಾನುಭವಿಯಾದ ಶ್ರೀಮತಿ ಪುಷ್ಪಲತಾ ರವರಿಗೆ ಉಳಿಕೆ ರೂ.25,000/– ಗಳನ್ನು 2 ಕಂತಿನಲ್ಲಿ ಕ್ರಾಸ್ ಚೆಕ್ ಮುಖಾಂತರ ಪಾವತಿಸಿರುವುದಾಗಿ ಹಾಗೂ ಉಳಿದ ಫಲಾನುಭವಿಗಳಿಗೆ ತಾನು ಯಾವುದೇ ಹಣವನ್ನು ಪಾವತಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಈ ಆಸನೌ–2 ರವರು ಸದರಿ ಹಣ ನೀಡುವ ಪೂರ್ವದಲ್ಲಿ ಪರಿಶೀಲಿಸಿದ ನಂತರವೇ ಹಣ ಮಂಜೂರು ಮಾಡಿರುವುದಾಗಿ, ತಾನು ಯಾವುದೇ ದುರ್ನಡತೆಯಾಗಲೀ ಅಥವಾ ಕರ್ತವ್ಯಲೋಪ ಎಸಗಿರುವುದಿಲ್ಲವಾದ್ದರಿಂದ ತನ್ನ ವಿರುದ್ಧದ ಪ್ರಕರಣವನ್ನು ಈ ಹಂತದಲ್ಲಿಯೇ ಮುಕ್ತಾಯಗೊಳಿಸುವಂತೆ ವಿನಂತಿಸಿರುತ್ತಾರೆ.

11) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು, ದೂರುದಾರರಾದ ಶ್ರೀ ಉಮಾಪತಿರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ಮತ್ತು ನಿ.ಪಿ–2ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯಾದ ಶ್ರೀ ಟಿ.ಆರ್.

ರಾಘವೇಂದ್ರ, ಪೊಲೀಸ್ ನಿರೀಕ್ಷಕರು, ಕಲಬುರಗಿ ಲೋಕಾಯುಕ್ತ ಪೊಲೀಸ್ ಠಾಣೆ ರವರನ್ನು ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–3 ರಿಂದ ನಿಪಿ–44 ದಾಖಲೆಯನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

12) ಶಿಸ್ತು ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ದಿನಾಂಕ 21/02/2019 ರಂದು ಆ.ಸ.ನೌ–1 ಮತ್ತು 2ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುತ್ತದೆ.

13) ಆ.ಸ.ನೌ–1 ರವರು ತಮ್ಮ ಪರವಾಗಿ ತಾನು ಡಿ.ಡಬ್ಲ್ಯು–21 ಎಂದು ಮೌಖಿಕ ಸಾಕ್ಷ್ಯ ನುಡಿದಿದ್ದು, ನಿ.ಡಿ–10 (ಆಕ್ಷೇಪಣೆ)ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಆಸನೌ–2 ರವರು ಡಿ.ಡಬ್ಲ್ಯು–2 ಎಂದು ಮೌಖಿಕ ಸಾಕ್ಷ್ಯ ನುಡಿದಿರುತ್ತಾರೆ. ಡಿ.ಡಬ್ಲ್ಯು–1 ಮತ್ತು 3 ರಿಂದ 20 ರವರೆಗೆ ಸಾಕ್ಷಿದಾರರುಗಳ ಸಾಕ್ಷಿ ನುಡಿಸಿಕೊಂಡಿರುತ್ತಾರೆ. ನಿಡಿ–1 ರಿಂದ 9 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

14) ಉಭಯ ಪಕ್ಷಗಾರರ ಪರವಾಗಿ ವಾದವಿವಾದವನ್ನು ಆಲಿಸಲಾಯಿತು ಮತ್ತು ಆ.ಸ.ನೌರವರ ಪರ ವಕೀಲರು ಸಲ್ಲಿಸಿದ ಲಿಖಿತ ವಾದಾಂಶವನ್ನು ಪರಿಶೀಲಿಸಲಾಯಿತು.

15) **ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.**

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ಮೇಲೆ ಆಪಾದಿಸಲಾದ ಪರಿಷ್ಕೃತ ದೋಷಾರೋಪಣೆಯಲ್ಲಿ ಕಾಣಿಸಿದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

16) ವಾದವಿವಾದ ಆಲಿಸಿದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** ಸಕಾರಾತ್ಮಕವಾಗಿ.

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

**17)** **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌ–1 ಮತ್ತು ಆ.ಸ.ನೌ–2ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪ್ರಕರಣದ ದೂರುದಾರರಾದ ಶ್ರೀ.ಉಮಾಪತಿ ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–1 ಮತ್ತು ನಿಪಿ–2 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ–1 ದಾಖಲೆಯು ಪ್ರಪತ್ರ–1 ಮತ್ತು ನಿಪಿ–2 ದಾಖಲೆಯು ಪ್ರಪತ್ರ–2 ಇರುತ್ತದೆ. ಶ್ರೀ.ಟಿ.ಆರ್.ರಾಘವೇಂದ್ರ ತನಿಖಾಧಿಕಾರಿಯವರನ್ನು ಪಿ.ಡಬ್ಲ್ಯು.2 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ–3 ರಿಂದ ನಿಪಿ–44 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಿಪಿ–3 ದಾಖಲೆಯು ಆಸನೌ–2 ರವರು ದಿ.19/5/2016 ರಂದು ಪಿ.ಡಬ್ಲ್ಯು–2 ರವರು ಪಡೆದುಕೊಂಡ ಹೇಳಿಕೆಯ ಪ್ರತಿ, ನಿಪಿ–4 ರಿಂದ 15 ದಾಖಲೆಯು, ತನಿಖಾಕಾಲದಲ್ಲಿ ಸಾಕ್ಷಿದಾರರು/ಫಲಾನುಭವಿಗಳಾದ ಸಿದ್ದಮ್ಮ, ಜಗದೇವಿ, ದೇವಿಬಾಯಿ, ರಾಜಶೇಖರ, ಇಂದುಮತಿ, ರತ್ನಮ್ಮ, ಮಹಾನಂದ, ಪುಷ್ಪಲತ, ಮಲ್ಲಮ್ಮ ಮಹಾದೇವಿ, ರಾಚಮ್ಮ, ಕವಿತಾಬಾಯಿ, ರವರ ಹೇಳಿಕೆಯ ಪ್ರತಿ. ನಿಪಿ.–16 (450 ಹಾಳೆಗಳು) ಈ ಹಿಂದೆ ತನಿಖೆ ಮಾಡಿದ ತನಿಖಾಧಿಕಾರಿಯಾದ ಶ್ರೀ.ಶಾಂತಿನಾಥ.ಬಿ.ಪಿ ರವರು ಸಂಗ್ರಹಿಸಿದ ಕಡತದ ದೃಢೀಕೃತ ಪ್ರತಿ, ನಿಪಿ–17 ದಾಖಲೆಯು ನಂದೂರು (ಕೆ) ಗ್ರಾಮ ಪಂಚಾಯಿತಿಯ ಪಿಡಿಒ ರವರಾಗಿದ್ದ ಶ್ರೀ.ಸಂದೀಪ್ ಬಿರಾದಾರ್ ರವರು ತನಿಖಾಧಿಕಾರಿಯಾಗಿದ್ದ ಶ್ರೀ.ಶಾಂತಿನಾಥ.ಬಿ.ಪಿ ರವರಿಗೆ ನೀಡಲಾಗಿದ್ದ ಮೂಲ ಪತ್ರ. ಹಾಗೂ ಅದಕ್ಕೆ ಲಗತ್ತಿಸಲಾದ ಎರಡು ಹಾಳೆಗಳನ್ನೊಳಗೊಂಡ

ಮೂಲ ಫಲಾನುಭವಿಗಳ ಪಟ್ಟಿ ನಿಪಿ–18 ಇರುತ್ತದೆ. ನಿಪಿ–19 (3 ಹಾಳೆಗಳು) ದಾಖಲೆಯು ತನಿಖಾಧಿಕಾರಿಯಾಗಿದ್ದ ಶ್ರೀ.ಶಾಂತಿನಾಥ ಬಿ.ಪಿ ರವರು ದಿ.5/12/2014 ರಂದು ಜರುಗಿಸಿದ ಮೂಲ ಪಂಚನಾಮೆ. ನಿಪಿ–20 ದಾಖಲೆಯು ಸದರಿ ತನಿಖಾಧಿಕಾರಿಯು ದಿ.5/12/2014 ರಂದು ದಾಖಲು ಮಾಡಿದ ಸಂದೀಪ್ ಬಿರಾದಾರ್ ರವರ ಮೂಲ ಹೇಳಿಕೆಯ ಪ್ರತಿ. ನಿಪಿ–21 ದಾಖಲೆಯು ಈರಣ್ಣ ಈರೇಗೌಡರ್ ರವರ ಹೇಳಿಕೆ. ನಿಪಿ–22 ರಿಂದ 38 ಪಂಚನಾಮೆ ಕಾಲಕ್ಕೆ ತೆಗೆಯಲಾದ ಛಾಯಾಚಿತ್ರಗಳು. ನಿಪಿ–39 ದಾಖಲೆಯು ಕಲಬುರಗಿ ಪಂಚಾಯತ್ ರಾಜ್ ಉಪ ವಿಭಾಗದ ಸಹಾಯಕ ಅಭಿಯಂತರರು ತನಿಖಾಧಿಕಾರಿಗೆ ಸಲ್ಲಿಸಿದ ಮೂಲ ವರದಿ. **ನಿಪಿ–40** ದಾಖಲೆಯು ಅದಕ್ಕೆ ಪೂರಕವಾಗುವಂತೆ ಲಗತ್ತಿಸಲಾದ ಪರಿಶೀಲನಾ ವರದಿ. **ನಿಪಿ–41** ದಾಖಲೆಯು ಆಸನೌ–1 ರವರು ತನಿಖಾಧಿಕಾರಿಯ ಮುಂದೆ ನೀಡಿದ ಹೇಳಿಕೆಯ ಪ್ರತಿ, **ನಿಪಿ–42** ದಾಖಲೆಯು ರಾಮದೇವ್ ರಾಠೋಡ್ ರವರ ಹೇಳಿಕೆಯ ಪ್ರತಿ. **ನಿಪಿ–43** ದಾಖಲೆಯು ದಿ.1/7/2016 ರಂದು ತನಿಖಾಧಿಕಾರಿಯು ದಾಖಲು ಮಾಡಿದ ಕಲಬುರಗಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಧನರಾಜ್ ಭೋರಾಳೆರವರ ಹೇಳಿಕೆ. **ನಿಪಿ–44** ದಾಖಲೆಯು ತನಿಖಾ ವರದಿ.

18) ದೂರುದಾರರ ಆಪಾದನೆ ಮತ್ತು ಆ.ಸ.ನೌರವರುಗಳ ವಿರುದ್ಧ ರಚಿಸಲಾದ ದೋಷಾರೋಪಣೆ ಏನೆಂದರೆ, ಈ ಆ.ಸ.ನೌರವರುಗಳು ಕಲಬುರಗಿ ತಾಲ್ಲೂಕಿನ ನಂದೂರು (ಕೆ)ಗ್ರಾಮಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ 2005–2006, 2006–07, 2008–09, 2009–10 ನೇ ಸಾಲಿನ ಇಂದಿರಾ ಆವಾಸ್ ಯೋಜನೆ ಮತ್ತು ಆಶ್ರಯ ಯೋಜನೆಯಡಿ ಮನೆಗಳನ್ನು ಕಟ್ಟದೆ, ಮನೆಗಳನ್ನು ಪೂರ್ಣಗೊಳಿಸದೆ ಇದ್ದರೂ ಸಹ ಇವರುಗಳು ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡಿ ದುರ್ನಡತೆ ಎಸಗಿ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡಿರುವುದಾಗಿ ಆಪಾದಿಸಲಾಗಿರುತ್ತದೆ.

19) ಶಿಸ್ತು ಪ್ರಾಧಿಕಾರವು ಆ.ಸ.ನೌ–1 ಮತ್ತು 2ರವರ ಮೇಲೆ ರಚಿಸಲಾದ ಆರೋಪವನ್ನು ರುಜುವಾತುಪಡಿಸಲು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು. ದೂರುದಾರರಾದ ಶ್ರೀ ಉಮಾಪತಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಿಪಿ–1 ಮತ್ತು 2 ದೂರು ನೀಡಿರುವ ಬಗ್ಗೆ ನುಡಿದಿರುತ್ತಾರೆ. ಆದರೆ, ಆರೋಪಕ್ಕೆ ಸಂಬಂದಿಸಿದಂತೆ ಯಾವುದೇ ಸಾಕ್ಷ್ಯ

ನುಡಿಯದೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ದೂರಿನಲ್ಲಿ ಇರುವ ತನ್ನ ಸಹಿಯನ್ನು ನಿರಾಕರಿಸಿರುವುದಿಲ್ಲ. ಕಾರಣ ದೂರುದಾರರು ನಿಪಿ-1 ಮತ್ತು 2 ರಂತೆ ನಿಗದಿತ ನಮೂನೆಯಲ್ಲಿ ದೂರು ನೀಡಿರುವುದು ಸ್ಪಷ್ಟವಾಗುತ್ತದೆ.

20) ಶಿಸ್ತು ಪ್ರಾಧಿಕಾರವು ಈ ಆಸನೌ-1 ಮತ್ತು 2 ರವರ ಮೇಲೆ ಹೊರಿಸಲಾದ ಆರೋಪ ರುಜುವಾತುಪಡಿಸಲು ತನಿಖೆ ಮಾಡಿದ ತನಿಖಾಧಿಕಾರಿಯಾದ ಶ್ರೀ.ಟಿ.ಆರ್.ರಾಘವೇಂದ್ರ, ಪೊಲೀಸ್ ನಿರೀಕ್ಷಕರು, ಕಲಬುರುಗಿ ಲೋಕಾಯುಕ್ತ ಪೊಲೀಸ್‌ಠಾಣೆ ರವರನ್ನು ಪಿ.ಡಬ್ಲ್ಯು-2 ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು, ಇವರ ಮುಖಾಂತರ ನಿಪಿ-3 ರಿಂದ 44 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಈ ಸಾಕ್ಷಿದಾರರು ತನಿಖಾ ಕಾಲಕ್ಕೆ ಪಡೆಯಲಾದ ಸಾಕ್ಷಿದಾರರು/ಫಲಾನುಭವಿಗಳ ಹೇಳಿಕೆಯ ಪ್ರತಿಗಳನ್ನು ಮತ್ತು ಆಸನೌ ರವರ ಹೇಳಿಕೆಯ ಪ್ರತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಅಲ್ಲದೆ, ತನಿಖಾ ಕಾಲಕ್ಕೆ ತೆಗೆಯಲಾದ ಛಾಯಾಚಿತ್ರ ಮತ್ತು ಪಂಚನಾಮೆಯನ್ನು ಗುರುತಿಸಿಕೊಂಡಿರುತ್ತಾರೆ. ಅಲ್ಲದೆ, ಈ ಆರೋಪಕ್ಕೆ ಸಂಬಂದಿಸಿದಂತೆ ಆಗಿನ ಕಲಬುರಗಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಧನರಾಜ ಭೋರಾಳೆ ರವರ ಹೇಳಿಕೆಯನ್ನು ನಿಪಿ-43 ಎಂದು ಗುರುತಿಸಿಕೊಂಡಿರುತ್ತಾರೆ. ಅಲ್ಲದೆ, ಸದರಿ ಹೇಳಿಕೆಯಿಂದ ಈ ಕರ್ತವ್ಯಲೋಪಕ್ಕೆ ಯಾರು ಹೊಣೆಗಾರರೆಂಬುದು ತನಗೆ ತಿಳಿದುಬಂದಿರುವುದಾಗಿ ನುಡಿದಿರುತ್ತಾರೆ. ಈ ಆರೋಪಕ್ಕೆ ಸಂಬಂದಿಸಿದಂತೆ ತನಿಖೆ ಮಾಡಿ ನಿಪಿ-44 ರಂತೆ ವರದಿ ಸಲ್ಲಿಸಿರುವ ಬಗ್ಗೆ ನುಡಿದಿರುತ್ತಾರೆ.

21) ಪಿ.ಡಬ್ಲ್ಯು-2/ತನಿಖಾಧಿಕಾರಿ ತನ್ನ ಮುಖ್ಯ ವಿಚಾರಣೆಯಲ್ಲಿ ಈ ಕೆಳಕಂಡಂತೆ ನುಡಿದಿರುತ್ತಾರೆ.

> **"ಸರ್ಕಾರದ ನಿಯಮ ಮತ್ತು ಮಾರ್ಗಸೂಚಿ ಪ್ರಕಾರವಾಗಿ ಕಡ್ಡಾಯವಾಗಿ ಇರಬೇಕಾಗಿದ್ದ ಗ್ರಾಮಸಭೆಯ ನಡವಳಿಗಳು, ಸಾಮಾನ್ಯ ಸಭೆಯ ಅನುಮೋದನೆ, ನಮೂನೆ-1 ರಲ್ಲಿಯ ಅರ್ಜಿ, ನಮೂನೆ-2 ರಲ್ಲಿಯ ಕರಾರು ಪತ್ರ, ಫಲಾನುಭವಿಯ ನೋಂದಣಿ ಪತ್ರ ಅಂದರೆ ಅಡಮಾನ ಪತ್ರ, ಫಲಾನುಭವಿಯ ಜಾತಿ ಪ್ರಮಾಣಪತ್ರ ಮತ್ತು ಹಂತವಾರು ಭಾವಚಿತ್ರಗಳು ನಿಪಿ-16 ರಲ್ಲಿ ಕಂಡು ಬರಲಿಲ್ಲ"**

**"ನಂದೂರು (ಕೆ) ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನಂದೂರ (ಬಿ), ಧರ್ಮಪುರ, ನಂದೂರು(ಕೆ) ಕೆಸರಟಗಿ ಗ್ರಾಮ ಮತ್ತು ನಂದೂರು ಸ್ಟೇಷನ್ ತಾಂಡಾಗಳಲ್ಲಿ 2005–06 ಮತ್ತು 2006–07ನೇಯ ಸಾಲಿನ ಆಶ್ರಯ ಮನೆ ಯೋಜನೆಯಡಿಯಲ್ಲಿ ಮತ್ತು 2008–09 ಹಾಗೂ 2009–10 ನೆ ಸಾಲಿನಲ್ಲಿ, ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಹಂಚಿಕೆಯಾದ ಮನೆಗಳಲ್ಲಿ ಕೆಲವೊಂದು ಮನೆಗಳನ್ನು ಕಟ್ಟದಿದ್ದರೂ ಮತ್ತು ಕೆಲವೊಂದು ಮನೆಗಳನ್ನು ಅಪೂರ್ಣವಾಗಿ ಕಟ್ಟಿದ್ದರೂ ಸಹ ನಂದೂರು (ಕೆ) ಗ್ರಾಮಪಂಚಾಯಿತಿಯ ಅಂದಿನ ಕಾರ್ಯದರ್ಶಿಯಾದ 1ನೆ ಆಸನೌರವರು ಹಾಗೂ ಆ ಪಂಚಾಯಿತಿಯ ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಎರಡನೆ ಆಸನೌರವರು ಸರಿಯಾಗಿ ಮನೆಗಳನ್ನು ಪರಿಶೀಲಿಸದೆ, ಫಲಾನುಭವಿಗಳಿಗೆ ಚೆಕ್‌ಗಳನ್ನು ನೀಡಿ ಫಿರ್ಯಾದಿನಲ್ಲಿ ಆಪಾದಿಸಲಾದ ಅವ್ಯವಹಾರಗಳಿಗೆ ಕಾರಣಕರ್ತರು ಎಂಬುದಾಗಿ ತನಿಖೆಯಿಂದ ಹೊರಹೊಮ್ಮಿತು."**

**"ಮಲ್ಲಮ್ಮ, ಇಂದುಬಾಯಿ, ಮಹಾನಂದ, ಕವಿತಾಬಾಯಿ, ರತ್ನಮ್ಮ, ಶಾಂತಾಬಾಯಿ, ದೇವಿಬಾಯಿ, ಸುಶೀಲಾಬಾಯಿ, ಮಲ್ಲಮ, ಸಿದ್ದಮ್ಮ, ಬಂಡೆಮ್ಮ, ಪುಷ್ಪಲತಾ, ಶಿವಮ್ಮ ಮತ್ತು ಶಿವುಬಾಯಿ ಎಂಬ ಹೆಸರಿನ ಮಹಿಳೆಯರು ಮನೆಗಳನ್ನು ನಿರ್ಮಿಸಿಲ್ಲವೆಂದು ತನಿಖೆಯಲ್ಲಿ ಕಂಡು ಬಂತು. ಮಹಾದೇವಿ, ರಾಚಮ್ಮ, ಮತ್ತು ಯಲ್ಲಮ್ಮ ರವರ ಮನೆಗಳಿಗೂ ಮತ್ತು ಛಾಯಾಚಿತ್ರಕ್ಕೂ ಹೊಂದಾಣಿಕೆ ಕಂಡು ಬರಲಿಲ್ಲ. ಇಂದುಮತಿ ರವರ ಮನೆಯು ಅಪೂರ್ಣವಾಗಿ ಇದ್ದದ್ದು ಕಂಡು ಬಂತು. ಜಗದೇವಿ ರವರಿಗೆ ಸಂಬಂದಪಟ್ಟಂತೆ ಎರಡು ಮನೆಗಳು ಹಂಚಿಕೆಯಾಗಿದ್ದು ಕಂಡು ಬಂತು. ಸದರಿ ಲೋಪಗಳಿಗೆ ಆಪಾದಿತ ಸರ್ಕಾರಿ ನೌಕರರುಗಳು ಕಾರಣ ಎಂಬುದಾಗಿ ಕಂಡು ಬಂತು"**

22) ಈ ಮೇಲ್ಕಂಡಂತೆ ನುಡಿದಿರುವುದನ್ನು ಪರಿಶೀಲಿಸಿದಾಗ, ದೂರಿನಲ್ಲಿ ಕಾಣಿಸಿದಂತೆ ಮತ್ತು ದೋಷಾರೋಪಣೆಯಲ್ಲಿ ಹೇಳಲಾದಂತೆ ಈ ಆ.ಸ.ನೌರವರುಗಳು ಫಲಾನುಭವಿಗಳಾದ ಮಲ್ಲಮ್ಮ, ಇಂದುಬಾಯಿ, ಮಹಾನಂದ, ಕವಿತಾಬಾಯಿ, ರತ್ನಮ್ಮ, ಶಾಂತಾಬಾಯಿ, ದೇವಿಬಾಯಿ,

ಸುಶೀಲಾಬಾಯಿ, ಮಲ್ಲಮ್ಮ, ಸಿದ್ದಮ್ಮ, ಬಂಡೆಮ್ಮ, ಪುಷ್ಪಲತಾ, ಶಿವಮ್ಮ ಮತ್ತು ಶಿವುಬಾಯಿ ಎಂಬ ಹೆಸರಿನ ಮಹಿಳೆಯರು ಮನೆಗಳನ್ನು ನಿರ್ಮಿಸಿಲ್ಲವೆಂದು ತನಿಖೆಯಲ್ಲಿ ಕಂಡು ಬಂದಿದ್ದು, ಮಹಾದೇವಿ, ರಾಚಮ್ಮ, ಮತ್ತು ಯಲ್ಲಮ್ಮ ರವರ ಮನೆಗಳಿಗೂ ಮತ್ತು ಛಾಯಾಚಿತ್ರಕ್ಕೂ ಹೊಂದಾಣಿಕೆ ಕಂಡು ಬಂದಿರುವುದಿಲ್ಲ. ಇಂದುಮತಿ ರವರ ಮನೆಯು ಅಪೂರ್ಣವಾಗಿ ಇದ್ದದ್ದು ಕಂಡು ಬಂದಿದ್ದು, ಜಗದೇವಿ ರವರಿಗೆ ಸಂಬಂದಪಟ್ಟಂತೆ ಎರಡು ಮನೆಗಳು ಹಂಚಿಕೆ ಮಾಡಿರುವುದು ಕಂಡು ಬಂದಿರುತ್ತದೆ. ಅಲ್ಲದೆ, ಸದರಿ ಲೋಪಗಳಿಗೆ ಆಪಾದಿತ ಸರ್ಕಾರಿ ನೌಕರರುಗಳೇ ಕಾರಣಕರ್ತರೆಂಬುದು ಸಹಾ ಕಂಡು ಬಂದಿರುತ್ತದೆ.

23) ಈ ಸಾಕ್ಷಿದಾರರನ್ನು ಆಸನೌ ಪರ ವಕೀಲರು ಸವಿಸ್ತಾರವಾದ ಪಾಟೀಸವಾಲು ವಿಚಾರಣೆ ಮಾಡಿದ್ದಾಗಿಯೂ, ಯಾವುದೇ ವ್ಯತಿರಿಕ್ತವಾದ ಸಾಕ್ಷ್ಯವನ್ನು ಹೊರತಂದಿರುವುದಿಲ್ಲ. ಆದರೆ, ಆಸನೌ-2 ರವರು ನಂದೂರು (ಕೆ)ಗ್ರಾಮದ ಪಿಡಿಒ ಆಗಿ ದಿನಾಂಕ 23/10/2010 ರಂದು ಆಸನೌ-1 ರವರಿಂದ ಪ್ರಭಾರ ವಹಿಸಿಕೊಂಡಿರುವುದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಸದರಿಯವರು ಅಧಿಕಾರ ವಹಿಸಿಕೊಳ್ಳುವ ಪೂರ್ವದಲ್ಲಿಯೇ, ಆಶ್ರಯ ಯೋಜನೆಯ 2005-06,2006-07, 2008-09, ಮತ್ತು 2009-10 ರ ಫಲಾನುಭವಿಗಳ ಪಟ್ಟಿ ಅನುಮೋದನೆಯಾಗಿತ್ತು ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಅದೇ ಪ್ರಕಾರ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಪಟ್ಟಿ ಸಹಾ ಅನುಮೋದನೆಯಾಗಿತ್ತು ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಈ ಸಾಕ್ಷಿದಾರರು ಈ ಕೆಳಕಂಡಂತೆ ನುಡಿದಿರುತ್ತಾರೆ.

> **"ನಿಪಿ-44 ನನ್ನ ವರದಿಯಲ್ಲಿ ಆಸನೌ-2 ರವರು ಪ್ರತ್ಯೇಕವಾಗಿ ಚೆಕ್ ಹಣ ಪಾವತಿಸಿಲ್ಲ ಎಂದರೆ ಸರಿ. ಸಾಕ್ಷಿ ಸ್ವತ: ಆಸನೌ 1 ಮತ್ತು 2 ರವರು ಜೊತೆಗೂಡಿ ಮಾಡಿರುವುದಾಗಿ ವರದಿಯಲ್ಲಿ ಕಾಣಿಸಿರುವುದಾಗಿ ನುಡಿಯುತ್ತಾರೆ. "**

24) ಈ ರೀತಿ ನುಡಿದಿರುವುದನ್ನು ಪರಿಶೀಲಿಸಿದಾಗ ಈ ಆಸನೌ-1 ಮತ್ತು 2 ರವರು ಕಾರಣಕರ್ತರೆಂದು **ನಿಪಿ-44** ವರದಿಯಲ್ಲಿ ಕಾಣಿಸಿರುವುದು ಕಂಡು ಬರುತ್ತದೆ. ತನಿಖಾ ಕಾಲಕ್ಕೆ ಈ ಆಸನೌ-2 ರವರು ನಂದೂರು (ಕೆ) ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿರಲಿಲ್ಲವೆಂದು ಹಾಗೂ ಸುಂಕನೂರು ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದರೆಂದು ಕಂಡು ಬರುತ್ತದೆ. ಈ

ಬಗ್ಗೆ ತನಿಖಾಧಿಕಾರಿ ಸಲ್ಲಿಸಿರುವ ನಿಪಿ-44 ವರದಿಯನ್ನು ಪರಿಶೀಲಿಸಿದಾಗ ಈ ಆಸನೌರವರುಗಳು ಫಲಾನುಭವಿಗಳಾದ 1)ಮಲ್ಲಮ್ಮ 2)ಮಹಾದೇವಿ 3)ಇಂದುಬಾಯಿ 4)ಮಹಾನಂದ 5)ಕವಿತಾಬಾಯಿ 6) ರಾಚಮ್ಮ 7) ರತ್ನಮ್ಮ 8) ಇಂದುಮತಿ 9)ಶಾಂತಬಾಯಿ 10) ದೇವೀಬಾಯಿ 11) ಸುಶೀಲಾಬಾಯಿ 12)ಮಲ್ಲಮ್ಮ 13)ಸಿದ್ದಮ್ಮ 14)ಬಂಡೆಮ್ಮ 15)ಪುಷ್ಪಲತ 16) ಶಿವಮ್ಮ 17)ಶಿವುಬಾಯಿ, 18) ಯಲ್ಲಮ್ಮ, 19) ಜಗದೇವಿ ರವರಿಗೆ ಆಶ್ರಯ ಮನೆ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಹಂಚಿಕೆಯಾದ ಮನೆಗಳಿಗೆ ಸಂಬಂದಿಸಿದಂತೆ ಯೋಜನೆಯ ನಿಯಮಗಳನ್ನು ನಿರ್ವಹಿಸದೆ ಹಾಗೂ ಇನ್ನುಳಿದ ಹತ್ತು ಕಡತಗಳನ್ನು ಕಚೇರಿಯಲ್ಲಿ ನಿರ್ವಹಿಸದೆ, ನಿರ್ಲಕ್ಷತನ ತೋರಿಸಿರುವುದು ನಿಪಿ-44 ವರದಿಯಿಂದ ಕಂಡು ಬರುತ್ತದೆ. ನಿಪಿ-43 ದಾಖಲೆಯು ಆಗಿನ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ.ಧನರಾಜ್ ಭೋರಾಳೆರವರ ಹೇಳಿಕೆಯಾಗಿದ್ದು, ಇವರು ನೀಡಿರುವ ಹೇಳಿಕೆಯಲ್ಲಿಯೂ ಈ ಕರ್ತವ್ಯಲೋಪಕ್ಕೆ ಈ ಆಸನೌರವರುಗಳೆ ಕಾರಣಕರ್ತರಿರುವುದಾಗಿ ಹೇಳಿಕೆ ನೀಡಿರುವುದು ಕಂಡು ಬರುತ್ತದೆ. ಆಸನೌರವರುಗಳು ತಮ್ಮ ವಿರುದ್ದದ ದೋಷಾರೋಪಣೆಯಲ್ಲಿನ ಸಂಗತಿಯನ್ನು ಅಲ್ಲಗಳೆಯಲು ತಮ್ಮ ಪರವಾಗಿ ಸಾಕ್ಷಿದಾರರಾದ ಡಿ.ಡಬ್ಲು-3 ರಿಂದ 19 ರವರ ಮೌಖಿಕ ಸಾಕ್ಷ್ಯವನ್ನು ನುಡಿಸಿಕೊಂಡಾಗಿಯೂ, ನಿಪಿ-44 ವರದಿಯಲ್ಲಿನ ಸಂಗತಿಯನ್ನು ಅಲ್ಲಗಳೆಯುವಂತಹ ದಾಖಲೆ ನೀಡುವಲ್ಲಿ ವಿಫಲರಾಗಿರುತ್ತಾರೆ. ಶಿಸ್ತು ಪ್ರಾಧಿಕಾರವು ಗುರ್ತಿಸಿಕೊಂಡಿರುವ ನಿಪಿ-22 ರಿಂದ ನಿಪಿ-38 ರವರೆಗಿನ ಪೋಟೋಗಳು ಮನೆ ಕಾಮಗಾರಿ ಅಪೂರ್ಣಗೊಂಡಿರುವುದನ್ನು ಸ್ಪಷ್ಟಪಡಿಸುತ್ತದೆ.

25) ಆ.ಸ.ನೌ-1 ಮತ್ತು 2 ರವರು ಸಲ್ಲಿಸಿರುವ ರಕ್ಷಣಾ ಹೇಳಿಕೆಯಲ್ಲಿ, ತನ್ನ ವಿರುದ್ಧದ ಆರೋಪವನ್ನು ನಿರಾಕರಿಸಿದ್ದಾಗಿಯೂ ಶಿಸ್ತು ಪ್ರಾಧಿಕಾರ ನೀಡಿರುವ ಸಾಕ್ಷ್ಯವನ್ನು ಅಲ್ಲಗಳೆಯುವಂತಹ ಸಾಕ್ಷ್ಯ ನೀಡುವಲ್ಲಿ ವಿಫಲರಾಗಿರುತ್ತಾರೆ. ಈ ಆ.ಸ.ನೌ-1 ಮತ್ತು 2ರವರು ಫಲಾನುಭವಿಗಳ ಹೆಸರಿಗೆ ಹಣ ಮಂಜೂರು ಮಾಡಿ ದುರ್ನಡತೆ ಎಸಗಿರುತ್ತಾರೆಂಬುದು ಆರೋಪವಾಗಿರುತ್ತದೆ. ಕಾರಣ, ನಿಡಿ-1 ರಿಂದ 9 ರ ಮೇಲಿನ ಸವಿಸ್ತಾರವಾದ ಚರ್ಚೆ ಅನವಶ್ಯಕ.

26) 1 ಮತ್ತು 2ನೇ ಆ.ಸ.ನೌ.ರವರು ಸಮರ್ಥಿಸಿಕೊಂಡಿರುವ ರಕ್ಷಣಾ ಸಮರ್ಥನೆಯು ಸರ್ಕಾರಿ ನೌಕರನಿಗೆ ತಕ್ಕುದಲ್ಲವಾಗಿರುತ್ತದೆ. ಆಸನೌ-2 ರವರು ಈ ಹಿಂದೆ ಆದ ಪ್ರಮಾದಗಳಿಗೆ

ಹೊಣೆಗಾರರಲ್ಲದೆ ಇದ್ದಾಗಿಯೂ, ತಾನು ಕರ್ತವ್ಯ ನಿರ್ವಹಿಸಿಕೊಂಡ ದಿನಾಂಕ 23/10/2010 ರ ನಂತರದ ವ್ಯವಹರಣೆಗಳಿಗೆ ಹೊಣೆಗಾರರಾಗಿರುತ್ತಾರೆ. ಈ ಕಾರಣದಿಂದಲೆ ತನಿಖಾಧಿಕಾರಿಯವರು ಈ ಆಸನೌ–2 ರವರ ಕರ್ತವ್ಯಲೋಪದ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಆ.ಸ.ನೌ–1 ಮತ್ತು 2ರವರು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

27) ಆ.ಸ.ನೌರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ **ಸಂಭವನೀಯತೆ** (probabilities) ಕಂಡು ಬಂದಿರುತ್ತದೆ.

28) ಕಾರಣ, ಶಿಸ್ತು ಪ್ರಾಧಿಕಾರದವರು ಆ.ಸ.ನೌ ರವರುಗಳು ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. **ಆಸನೌ–1 ರವರು ದಿನಾಂಕ 31/08/2028 ರಂದು ಹಾಗೂ ಆಸನೌ–2 ರವರು ದಿನಾಂಕ 31/07/2038 ರಂದು ನಿವೃತ್ತಿ ಹೊಂದುವವರಿದ್ದಾರೆ. ಈ ಎಲ್ಲಾ ಕಾರಣಗಳಿಂದ ಅಂಶ ನಂ.1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

*ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ* **(1)ಶ್ರೀ ಹರಿಶ್ಚಂದ್ರ,** ಕಾರ್ಯದರ್ಶಿ ಮತ್ತು **(2) ಕುಮಾರಿ ಶೈಲಜ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಂದೂರ (ಕೆ) ಗ್ರಾಮ ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ *ರವರುಗಳ ವಿರುದ್ಧ ಹೊರಿಸಲಾದ ಆರೋಪವನ್ನು* ***ರುಜುವಾತುಪಡಿಸಲಾಗಿದೆ*** *ಎಂದು ನಿರ್ಣಯಿಸಲಾಗಿದೆ.*

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-1ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

7ನೇ ಫೆಬ್ರವರಿ 2020

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**GOVERNMENT OF KARNATAKA**

**KARNATAKA LOKAYUKTA**

No:UPLOK-1/DE/104/2017/ARE-16

Multi Storied Buildings,
Dr.B.R.Ambedkar Veedhi,
Bengaluru-560 001,
Date: **11/02/2020**

**RECOMMENDATION**

Sub:- Departmental inquiry against;

1) Sri Harischandra S/o Somala Rathod, Secretary, Nandur (K) Gram Panchayath, Aland Taluk, Kalaburagi District;

2) Kumari Shailaja D/o Basavarajappa, Panchayath Development Officer, Nandur (K) Gram Panchayath, Aland Taluk, Kalaburagi District.

Ref:- 1) Government Order No.ಗ್ರಾಅಪ/900/ಗ್ರಾಪಂಕಾ/2016 Bengaluru dated 11/01/2017.

2) Nomination order No.UPLOK-1/DE/104/2017 Bengaluru dated 23/01/2017 of Upalokayukta-1, State of Karnataka, Bengaluru.

3) Inquiry Report dated 07/02/2020 of Additional Registrar of Enquiries-16, Karnataka Lokayukta, Bengaluru

----

The Government by its Order dated 11/01/2017 initiated the disciplinary proceedings against (1) Sri Harischandra S/o Somala Rathod, Secretary, Nandur (K) Gram Panchayath, Aland Taluk, Kalaburagi District and (2) Kumari Shailaja D/o Basavarajappa, Panchayath Development Officer, Nandur (K) Gram Panchayath, Aland Taluk, Kalaburagi District (hereinafter referred to as Delinquent Government Official's 1 and 2 for short as 'DGO-1 and DGO-2 respectively') and entrusted the Departmental Inquiry to this Institution.

2. This Institution by Nomination Order No.UPLOK-1/DE/104/2017 dated 23/01/2017 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 and 2 for the alleged charge of misconduct, said to have been committed by them. Subsequently by Order No. UPLOK-1&2/DE/Transfers/2019 dated 07/02/2019 the Additional Registrar of Enquiries-16 was re-nominated as Inquiry Officer to conduct Departmental inquiry against DGOs 1 and 2.

3. The DGO-1 Sri Harischandra S/o Somala Rathod, Secretary, Nandur (K) Gram Panchayath, Aland Taluk, Kalaburagi District and DGO-2 Kumari Shailaja D/o Basavarajappa, Panchayath Development Officer, Nandur (K) Gram Panchayath, Aland Taluk, Kalaburagi District were tried for the following charge:-

> "ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಹರಿಶ್ಚಂದ್ರ ಆದ ನೀವು ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕಿನ ನಂದೂರು ಕೆ. ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರಿ ಕಾರ್ಯದರ್ಶಿಯಾಗಿ 2007ನೇ ಇಸವಿಯಲ್ಲಿ ಹಾಗೂ ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಕುಮಾರಿ ಶೈಲಜಾ ಆದ ನೀವು ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕಿನ ನಂದೂರು ಕೆ. ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ 2010ನೇ ಇಸವಿಯಲ್ಲಿ ನೀವುಗಳು ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 2005-06, 2006-07, 2008-09, 2009-10 ನೇಯ ಸಾಲಿನ ಇಂದಿರಾ ಆವಾಸ್ ಯೋಜನೆ ಮತ್ತು 2005-06 ನೇಯ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಮನೆಗಳನ್ನು ಕಟ್ಟದೇ ಇದ್ದರೂ ಹಾಗೂ ಮನೆಗಳನ್ನು ಪೂರ್ಣಗೊಳಿಸದೇ ಇದ್ದರೂ ಸಹ, ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡುವುದರ ಮೂಲಕ ಸರ್ಕಾರಿ ನೌಕರರಿಗೆ ತಕ್ಕದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ."

4. The Inquiry Officer (Additional Registrar of Enquiries-16) on proper appreciation of oral and documentary evidence has held that the Disciplinary Authority has proved the above charge against DGO-1 Sri Harischandra S/o Somala Rathod, Secretary, Nandur (K) Gram Panchayath, Aland Taluk, Kalaburagi District and DGO-2 Kumari Shailaja D/o Basavarajappa, Panchayath Development Officer, Nandur (K) Gram Panchayath, Aland Taluk, Kalaburagi District.

5. On re-consideration of inquiry report, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per the First Oral Statement submitted by DGOs 1 and 2;

i) DGO-1 Sri Harischandra is due to retire from service on 31/08/2028.

ii) DGO-2 Kumari Shailaja is due to retire from service on 31/07/2028.

7. Having regard to the nature of charge proved against DGO-1 Sri Harischandra and DGO-2 Kumari Shailaja;

i) it is hereby recommended to the Government for imposing penalty of withholding four annual increments payable to DGO-1 Sri Harischandra S/o Somala Rathod, Secretary, Nandur (K) Gram Panchayath, Aland Taluk, Kalaburagi District with cumulative effect and also for deferring the promotion of DGO-1 Sri Harischandra Somala Rathod by four years, whenever he becomes due for promotion.

ii) it is hereby recommended to the Government for imposing penalty of withholding four annual increments payable to DGO-2 Kumari Shailaja D/o Basavarajappa, Panchayath Development Officer, Nandur (K) Gram Panchayath, Aland Taluk, Kalaburagi District with cumulative effect and also for deferring the promotion of DGO-2 Kum. Shailaja D/o. Basavarajappa by four years, whenever she becomes due for promotion;

8. Action taken in the matter shall be intimated to this Authority.

Connected records are enclosed herewith.

N. Ananda
11/2

**(JUSTICE N. ANANDA)**
Upalokayukta-1,
State of Karnataka,
Bengaluru